**<u>1ನೇ  ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .</u>**

**<u>ಸಿ.ಸಿ. ಸಂಖ್ಯೆ:  1243/2021</u>**

ಹೆಸರುಃ   ರುದ್ರೇಗೌಡ ರೇವಣ ಗೌಡ ಪಾಟೀಲ್ ಸಿ.ಡಬ್ಲ್ಯೂಃ 22

ವಯಸ್ಸುಃ   57 ಪಿ.ಡಬ್ಲ್ಯೂಃ 6

ತಂದೆಃ   ರೇವಣಗೌಡ

ಉದ್ಯೋಗಃ  ಪಿಐ ಶಿಕಾರಿಪುರ ಗ್ರಾಮಾಂತರ ಠಾಣೆ

ವಾಸ ಸ್ಥಳಃ   ಶಿಕಾರಿಪುರ

ಸಾಕ್ಷಿಗೆ  ದಿನಾಂಕಃ 23.10.2024  ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಸಅಅರವರಿಂದ ಮುಖ್ಯ ವಿಚಾರಣೆ</u>**

18-07.2019  ರಿಂದ 02-04-2021 ರವರೆಗೆ ಪಿ.ಎಸ್.ಐ ಆಗಿ ಚನ್ನಗಿರಿ  ಪೋಲೀಸ್ ಠಾಣೆಯಲ್ಲಿ  ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 15-07-2020 ರಂದು ಚಾಸಾ 19 ರವರಿಂದ ಪ್ರಕರಣದ ಕಡತವನ್ನು ಪಡೆದು ತನಿಖೆಯನ್ನು ಮುಂದುವರೆಸಿರುತ್ತೇನೆ.

ದಿಃ 12-12-2020 ರಂದು ಮಾನ್ಯ ನ್ಯಾಯಾಲಯಕ್ಕೆ ಆರೋಪಿತನ ಮೇಲೆ ಬಾಡಿವಾರೆಂಟ್ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ದಿಃ 18-12-2020 ರಂದು ಚಾಸಾ 21 ರವರು ತಮ್ಮ ಠಾಣೆ ಪ್ರಕರಣ ಸಂಃ 141/2020 ರಲ್ಲಿ ತನಿಖೆ ಕಾಲಕ್ಕೆ ಈ ಪ್ರಕರಣಕ್ಕೆ ಸಂಬಂಧಪಟ್ಟ ಮು.ಮಾಲುಗಳನ್ನು ವಶಪಡಿಸಿಕೊಂಡಿದ್ದು ಅವುಗಳನ್ನು ಸಿಪಿಸಿ 407 ರ ಮುಖಾಂತರ ನನ್ನ ಕಚೇರಿಗೆ ಕಳುಹಿಸಿಕೊಟ್ಟಿರುತ್ತಾರೆ. ಚಾಸಾ 8 ಮತ್ತು 9 ರವರ ಉಪಸ್ಥಿತಿಯಲ್ಲಿ ಅಮಾನತು ಪಂಚನಾಮೆಯನ್ನು ಸಂಜೆ 5-00 ಗಂಟೆಯಿಂದ 6-00 ಗಂಟೆಯವರೆಗೆ ಜರುಗಿಸಿರುತ್ತೆನೆ. ಅಮಾನತು ಪಂಚನಾಮೆ ಕಾಲಕ್ಕೆ ಪ್ರಸ್ತುತ ಪ್ರಕರಣದ 3.5 ಗ್ರಾಂ ಉಳ್ಳ ಒಂದು ಜೊತೆ ಬಂಗಾರದ ಕಿವಿಯೋಲೆ, 10 ಗ್ರಾಂ ತೂಕದ ಒಂದು ಜೊತೆ ಲಕ್ಷ್ಮೀ ಚಿತ್ರ ಇರುವ ಬೆಳ್ಳಿ ಕಾಯಿನ್ ಹಾಗೂ 5 ಗ್ರಾಂ ತೂಕವುಳ್ಳ ಒಂದು ಬೆಳ್ಳಿ ಪದಕವನ್ನು

ಅಮಾನತುಪಡಿಸಿಕೊಂಡಿರುತ್ತೇನೆ. ನಂತರ ಮಾಲು ಪಟ್ಟಿ ಸಂಃ 192/2020 ರಂತೆ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅಮಾನತು ಪಂಚನಾಮೆಯಲ್ಲಿ ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 1ಎ ಎಂದು ಗುರುತಿಸಲಾಯಿತು. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

ಚಾಸಾ 21 ರವರು ತಮ್ಮ ಪ್ರಕರಣಕ್ಕೆ ಸಂಬಂಧಪಟ್ಟ ಸಿ ಆರ್ ನಂಃ 141/2020 ರಲ್ಲಿನ ಪಂಚನಾಮೆಗಳನ್ನು, ಹೇಳಿಕೆಗಳನ್ನು, ಆರೋಪಿಯ ಸ್ವ ಇಚ್ಚಾ ಹೇಳಿಕೆಯನ್ನು, ಮಾಲುಪಟ್ಟಿಯನ್ನು ನನ್ನ ಕಚೇರಿಗೆ ಕಳುಹಿಸಿದ್ದು ನಾನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ. ಅದೇ ದಿನ ಚಾಸಾ 1 ರವರು ಮರುಹೇಳಿಕೆಯನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೆನೆ. ದಿಃ 22-12-2020 ರಂದು ತನಿಖೆ ಕಾಲಕ್ಕೆ ಆರೋಪಿತರ ವಿರುದ್ಧ ಆರೋಪ ಸಾಬೀತಾದ್ದರಿಂದ ದೋ. ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಕಾರಾಗೃಹದಿಂದ ವಿಡಿಯೋ  ಕಾಲ್ ಮುಖೇನ ಹಾಜರಿದ್ದು, ಸದರಿ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಆರೋಪಿ ಪರ ವಕೀಲರಿಂದ ಪಾಟೀಸವಾಲು ಃ-**

ನಾನು ಯಾವುದೇ ತನಿಖೆಯನ್ನು ಕೈಗೊಳ್ಳದೇ ಇದ್ದರು ಆರೋಪಿಯ ವಿರುದ್ಧ ಸುಳ್ಳು ದೋ.  ಪಟ್ಟಿಯನ್ನು  ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ  ಪ್ರಕರಣಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸುಳ್ಳು ದೋ. ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 3.5 ಗ್ರಾಂ ಉಳ್ಳ ಒಂದು ಜೊತೆ ಬಂಗಾರದ ಕಿವಿಯೋಲೆ, 10 ಗ್ರಾಂ ತೂಕದ ಒಂದು ಜೊತೆ ಲಕ್ಷ್ಮೀ ಚಿತ್ರ ಇರುವ ಬೆಳ್ಳಿ ಕಾಯಿನ್ ಹಾಗೂ 5 ಗ್ರಾಂ ತೂಕವುಳ್ಳ ಒಂದು ಬೆಳ್ಳಿ ಪದಕವನ್ನು ನಾನು ಅಮಾನತು

ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಠಾಣೆ ಅಂಕಿ ಸಂಖ್ಯೆಗಳಿಗಾಗಿ ಆರೋಪಿತರಿಗೂ ಮು.ಮಾಲಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸುಳ್ಳು ದೋ.ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**Sd/-**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**